1985ರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಗುಜರಾತಿ ಲೇಖಕ ಪನ್ನಾಲಾಲ್ ಪಟೇಲ್ ಡುಂಗರ್‌ಪುರ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದವರು. ರಾಜಾಸ್ಥಾನಿ ಸೀಮೆಯ ಹಳ್ಳಿಗಳ ಜಗತ್ತನ್ನು, ಆಡುಭಾಷೆಯ ಸೊಗಡಿನೊಂದಿಗೆ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ರೊಮ್ಯಾಂಟಿಕ್ ಪ್ರವೃತ್ತಿಯ ಪಟೇಲರು ಹೃದಯದ ಭಾವಗಳ ಕುರಿತು ಆಪ್ತವಾಗಿ ಬರೆಯುತ್ತಿದ್ದರು. ಐವತ್ತಕ್ಕೂ ಹೆಚ್ಚಿನ ಕಾದಂಬರಿ, ಇಪ್ಪತ್ತಕ್ಕೂ ಹೆಚ್ಚಿನ ಕವನ ಸಂಕಲನ, ನಾಟಕಗಳು, ಆತ್ಮಕಥನ, ಶಿಶುಸಾಹಿತ್ಯ ಮತ್ತು ಕೆಲವು ಪ್ರಬಂಧಗಳನ್ನು ರಚಿಸಿರುವ ಪಟೇಲರು ಮುಖ್ಯವಾಗಿ ಗುರ್ತಿಸಲ್ಪಟ್ಟಿರುವುದು ಕಾದಂಬರಿಕಾರರಾಗಿ.

ಈ ದಾರಿಯಲ್ಲಿ ಹೋಗಬೇಕು' ಎಂದು ಹೇಳಿದ. 'ಈ ಸಲ ಅವನು ಖಂಡಿತ ನನ್ನನ್ನು ದೂರ ಕರಕೊಂಡು ಹೋಗ್ತಾನೆ' ಎಂದವಳು ಹೇಳಿದ್ದಕ್ಕೆ ಅವನು ಜೋರಾಗಿ ನಕ್ಕು ಬಿಟ್ಟ.

ಅಷ್ಟೇ ಅಲ್ಲ. ಮುಂದಿನ ಆರು ತಿಂಗಳಿಗೆ ನಡೆಯುವ 'ಅಂಬ್ಲಿ' ಜಾತ್ರೆಯಲ್ಲಿ ಮತ್ತೆ ಅವಳನ್ನು ಭೇಟಿಯಾಗಲು ನಿರ್ಧರಿಸಿದ. ಅವಳು ಹೋಗುವಾಗ ಆಗತಾನೇ ತನ್ನಲ್ಲಿ ಮೂಡಿದ ಹೊಸ ಭರವಸೆಯೊಂದಿಗೆ ಅವನತ್ತ ಬೀರಿದ ನಲ್ಮೆಯ ನೋಟವು ಅರ್ಜುನನು ಮತ್ಸ್ಯಭೇದವನ್ನು ಮಾಡಿದಾಗ ದ್ರೌಪದಿಯು ಅವನನ್ನು ನೋಡಿದ ನೋಟದಂತೆಯೇ ಇತ್ತು.

ಅವಳ ನಡಿಗೆ ಬಹಳ ತವಕದಿಂದ ಭಾರವಾದಂತಾಗಿ ಮನೆಯನ್ನು ತಲುಪಲು ಅಸ್ವಸ್ಥಳಾಗಿ ಕಂಡು, ಹೊಸ ನಾಟಕವನ್ನೇ ಆಡಲು ಆರಂಭಿಸಿದಳು. ಅವಳು ಜಾತ್ರೆಯ ಕೊನೆಯನ್ನು ತಲುಪುತ್ತಿದ್ದಂತೆಯೇ, ತನ್ನ ಜೊತೆ ಬಂದವರು ತನಗಾಗಿ ಕಾಯುತ್ತಿದ್ದುದನ್ನು ಕಂಡಾಕ್ಷಣ ಅವಳ ಕಾಲುಗಳು ನಿಂತವು. ಜೋರಾಗಿ 'ನಿಲ್ಲಿ, ಒಂದು ನಿಮಿಷ, ಈಗಲೇ ಬಂದುಬಿಡ್ತಿನಿ' ಎಂದು ಕೂಗಿದಳು.

ತನ್ನ ಸೀರೆಯ ಸೆರಗಿನ ತುದಿಯಲ್ಲಿ ಗಂಟುಕಟ್ಟಿದ್ದ ಹಣವನ್ನು ಬಿಚ್ಚಿಕೊಂಡು, ತಿರುಗಿ ಜಾತ್ರೆಯೊಳಗೆ ಹೋದಳು.

ಮೊಟ್ಟ ಮೊದಲ ಅಂಗಡಿಯಲ್ಲಿ ತನ್ನ ನಾದಿನಿಗೆಂದು ಮಣಿಗಳ ಸರವೊಂದನ್ನು ಖರೀದಿಸಿದಳು. ಒಂದು ಕ್ಷಣ 'ತನ್ನ ಅತ್ತೆಗೆ ಏನನ್ನು ತೆಗೆದುಕೊಂಡು ಹೋಗುವುದು?' ಎಂದು ಯೋಚಿಸಿದಳು. ಕೊನೆಗೆ ನಾಲ್ಕಾಣೆಯನ್ನು ಕೊಟ್ಟು ಸುಗಂಧದ ನಶ್ಯವನ್ನು ತೆಗೆದುಕೊಂಡಳು.

ತನ್ನ ಗಂಡನಿಗಾಗಿ ಏನಾದರೂ ಚೆನ್ನಾಗಿರುವುದನ್ನು ಕೊಳ್ಳಬೇಕೆಂದುಕೊಂಡಳು. ಆದರೆ ಏನನ್ನು ಕೊಳ್ಳುವುದು ಎಂದು ತಿಳಿಯಲಿಲ್ಲ. ತನ್ನ ಹತ್ತಿರ ಹಣವಿಲ್ಲದಿದ್ದರೂ ಸುಮ್ಮನೆ, 'ಈ ಹಿತ್ತಾಳೆಯ ಕೊಳಲು ಎಷ್ಟಾಗ್ತದೆ, ವೊಹ್ರಾಜಿ.' ಎಂದು ಕೇಳಿದಳು.

ವೊಹ್ರಾಜಿ, 'ಹೊರಳುಗಂಗಳ ಹೆಣ್ಣೊಬ್ಬಳು ಕೊಳಲಿನ ಬೆಲೆ ಕೇಳ್ತಿದ್ದಾಳಲ್ಲ!' ಎಂದು ಅಚ್ಚರಿಗೊಂಡ.'ನಿನಗೆ ಕೊಳಲು ಬೇಕುತಾನೆ?' ಅದರ ಬೆಲೆ, ಒಂದು ರೂಪಾಯಿ ನಾಲ್ಕಾಣೆ ಅಷ್ಟೇ' ಎಂದ.

ಕೊಳಲನ್ನು ಕೊಂಡುಕೊಳ್ಳುವ ತನ್ನ ನಿರ್ಧಾರದಿಂದ ತಾನೇ ಚಕಿತಳಾಗಿ, ನಿಜವಾಗಿ ಅದನ್ನು ಕೊಳ್ಳುವವಳಂತೆ! ಸ್ವಲ್ಪ ಕಡಿಮೆ ಮಾಡಿಕೋ?' ಎಂದು ಚೌಕಾಸಿ ಮಾಡತೊಡಗಿದಳು.

'ಆಯ್ತು, ಒಂದು ರೂಪಾಯಿ ಕೊಡು, ಜಾತ್ರೆಯೆಲ್ಲಾ ಮುಗೀತು, ತಗಿ ಬೇಗ ದುಡ್ಡು.'

'ತಾಳು ಒಂದು ನಿಮಿಷ, ನೋಡ್ತೀನಿ ತಗೊಳಕ್ಕೆ ಆಗ್ತದಾ ಅಂತ' ಎಂದು ತನ್ನನ್ನು ಕಾಯುತ್ತಿದ್ದ ಗುಂಪಿನೆಡೆಗೆ ಬಂದು: 'ನಿಮ್ಮಲ್ಲಿ ಯಾರಾದರೂ ಒಂದು ರೂಪಾಯಿ ಕೊಡ್ತೀರಾ? ನಾನು ಮನೆಗೆ ಹೋದ ಮೇಲೆ ವಾಪಸ್ಸು ಕೊಡ್ತೀನಿ' ಎಂದು ಕೇಳಿದಳು.

ಅವರಲ್ಲೊಬ್ಬ ಒಂದು ರೂಪಾಯಿ ಇಟ್ಟುಕೊಂಡಿದ್ದ. ಅದನ್ನು ಅವಳ ಕೈಗೆ ಕೊಡುತ್ತ 'ಈಗಲೇ ಏನು ತಗೋಬೇಕು ಅನ್ತಿದ್ದೀಯಾ ಬಾಬಿ?' ಎಂದ.

ಅದಕ್ಕವಳು 'ಅದೇನು ಅಂತ. ತಂದ ಮೇಲೆ ನೋಡು' ಎಂದು ಹೇಳಿ ರೂಪಾಯಿಯೊಂದಿಗೆ ಅಲ್ಲಿಂದ ಹೊರಟುಹೋದಳು.

ಕೂಡಲೇ ಅವಳು ಕೊಳಲೊಂದನ್ನು ಕೈಯಲ್ಲಿ ಹಿಡಿದುಕೊಂಡು ಬಂದಳು. ಇಡೀ ಜನ ಅಚ್ಚರಿಯಿಂದ ಒಬ್ಬರ ಮುಖವನ್ನೊಬ್ಬರು ನೋಡಿದರು, ಮತ್ತೊಮ್ಮೆ